ಈ ದಿನ ದಿನಾಂಕಃ 05-07-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲು **1** ನೇ ಪ್ರತಿವಾದಿ ಪರ ಶ್ರೀ ಆರ್ ಬಿ ವಕೀಲರಿಂದಃ</u>

ದಾವಾ ಸ್ವತ್ತಿನಲ್ಲಿ ಕೊಳವೆ ಬಾವಿಯ ವಸ್ತುಸ್ಥಿತಿಯನ್ನು ರುಜುವಾತುಪಡಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಕೊಳವೆ ಬಾವಿಯಿಂದ ನಾನು ನೀರನ್ನು ಉಪಯೋಗಿಸುತ್ತಿದ್ದೇನೆ. ಕೊಳವೆ ಬಾವಿಗೆ ಟಿ ಸಿ ಹಾಕಿಸಿರುತ್ತೇನೆ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಟಿ ಸಿ ಬರುತ್ತದೆ. ಟಿ ಸಿ ಹಾಕಿಸಲು ಯಾವ ಕಂಟ್ರಾ ಕ್ಟರ್ ಗೆ ನೇಮಿಸಿರುತ್ತಾರೆ ಎಂದು ನನ್ನ ತಂದೆಗೆ ಗೊತ್ತು. ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಟಿ ಸಿ ಎಷ್ಟು ಕಿಲೋ ವ್ಯಾಟ್ ನದು ಎಂದು ನನಗೆ ಗೊತ್ತಿಲ್ಲ. ಟಿ ಸಿ ಹಾಕಿಸಲು ಕೆ ಇ ಬಿ ಗೆ ನೀಡಿರುವ ದಾಖಲಗಳ ಬಗ್ಗೆ ನನಗೆ ಗೊತ್ತಿಲ್ಲ. ಟಿ ಸಿ ಹಾಕಿಸಲು ಎಷ್ಟು ಹಣ ಖರ್ಚಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ತಂದೆಯಿಂದ ಕೇಳಿ ಪಡೆದಿರುವುದಿಲ್ಲ. ಟಸಿ ಹಾಕಿಸಲು ಕೆ ಇ ಬಿ ಗೆ ಯಾವ ಜಮೀನಿನ ದಾಖಲೆಗಳನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಈ ಹಿಂದೆ ನುಡಿದ ಚೆಕ್ಕು ಬಂದಿ ಸತ್ಯವಾಗಿರುತ್ತದೆ. ಲಲಿತಮ್ಮ ನವರ ಜಮೀದಿನ ಉತ್ತರ ಭಾಗಕ್ಕೆ ನಾಗವೇಣಮ್ಮನ ಜಮೀನು ಇರುತ್ತದೆ. ನಾಗವೇಣಮ್ಮ ನವರ ಜಮೀನಿನ ನಂತರ ಯಾವ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸ್ವಾಧೀನದಲ್ಲಿರುವ ಜಮೀನಿನ ಇಕ್ಕೆಲಗಳಲ್ಲಿರುವ ಜಮೀನುಗಳಲ್ಲಿ ನಾನು ಓಡಾಡಿರುತ್ತೇನೆ. ಸದರಿ ಜಮೀನುಗಳ

ಸ್ವಾಧೀನದಲ್ಲಿರುವವರ ಹೆಸರು ಕುಬೇಂದ್ರೋಜಿರಾವ್ , ವೆಂಕಟೇಶ್ , ಸವಿತಾ, ಅಂಬೋಜಿ ರಾವ್ , ಸರ್ಫುನ್ನಿಸಾ , ಲಲಿತಮ್ಮ . ಇವರೆಲ್ಲರೂ ನನ್ನ ಜಮೀನಿನ ಪೂರ್ವ , ಉತ್ತರ ಹಾಗೂ ಪಶ್ಚಿಮ ದಿಕ್ಕಿನಲ್ಲಿರುವ ಜಮೀನುಗಳ ಸ್ವಾಧೀನದಲ್ಲಿರುತ್ತಾರೆ. ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ ಸುಮಾರು 8 ರಿಂದ 9 ಜಮೀನುಗಳು ಇದ್ದು ಸದರಿ ಜಮೀನುಗಳ ಮಾಲಿಕರ ಹೆಸರು ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ದಕ್ಷಿಣ ಭಾಗಕ್ಕೆ ಬಗರಿ ಹುಕುಂ ಜಮೀನು ಇರುತ್ತದೆ. ನಿಪಿ.1 ರಲ್ಲಿ ನಮೂದಿಸಿರುವ ಚೆಕ್ಕು ಬಂದಿ ತಪ್ಪಾಗಿ ಇರುತ್ತದೆ ಎಂದರೆ ಸರಿಯಲ್ಲ. 01 ನೇ ಪ್ರತಿವಾದಿಯ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ.1 ರಲ್ಲಿ ನಮೂದಿಸಿರುವ ಚೆಕ್ಕು ಬಂದಿಗಳನ್ನು ಪ್ರಸ್ತುತ ದಾವಯಲ್ಲಿ ನಮೂದಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

01 ನೇ ಪ್ರತಿವಾದಿಯ ಜಮೀನಿನ ಪೂರ್ವ ಭಾಗಕ್ಕೆ ಹಳ್ಳ ಹಾಗೂ ಯೂಸೂಫ್ ಸಾಬ್ ರವರ ಜಮೀನು ಎಂದರೆ ಸರಿ, ಪಶ್ಚಿಮಕ್ಕೆ ಲಲಿತಮ್ಮ ನವರ ಜಮೀನು ಎಂದರೆ ಸರಿ, ಉತ್ತರಕ್ಕೆ ಹಳ್ಳ ಮತ್ತು ಖಲೀಲ್ ಸಾಬ್ ರವರ ಜಮೀನು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಉತ್ತರ ದಿಕ್ಕಿಗೆ ನನ್ನ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ನಾಗಪ್ಪ ತಂದೆ ರಂಗಪ್ಪ ರವರ ಜಮೀನು ಎಂದರೆ ಸರಿ. ಸದರಿ ಚೆಕ್ಕು ಬಂದಿಯೇ ಪ್ರಸ್ತುತ ದಾವೆಯ ದಾವಾ ಸ್ವತ್ತು ಎಂದರೆ ಸರಿಯಲ್ಲ.

**02** ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು**.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.